ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

ಸಂ. DTE-ADMI0ACM2/20 /2022

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-560 001.
ದಿನಾಂಕ:20-10-2023.

-:: ಸುತ್ತೋಲೆ ::-

ವಿಷಯ:- 2023-24ನೇ ಸಾಲಿನ ಡಿಪ್ಲೋಮಾ ಪ್ರವೇಶಾತಿ ಸಂಬಂಧ ಸಂಗ್ರಹವಾಗಿರುವ ಅರ್ಜಿ ನೋಂದಣಿ ಶುಲ್ಕವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಎಸ್.ಬಿ ಖಾತೆಗೆ ಜಮೆ ಮಾಡುವ ಬಗ್ಗೆ.

ಉಲ್ಲೇಖ:- 1. ಸರ್ಕಾರದ ಪತ್ರ ಸಂ. ಇಡಿ 56 ಡಿಟಿಇ 2023, ದಿ:12-05-2023.

2. ಈ ಕಛೇರಿ ಪ್ರವೇಶಾಧಿಸೂಚನೆ ಪತ್ರ ಸಂ.DTE-ADMI0ACM2/20/2023, ದಿ:08-05-2023.

******

ಉಲ್ಲೇಖ(1)ರ ಸರ್ಕಾರದ ಪತ್ರದಲ್ಲಿ ಅನುಮತಿಸಿದಂತೆ 2023-24ನೇ ಶೈಕ್ಷಣಿಕ ಸಾಲಿಗೆ ಡಿಪ್ಲೋಮಾ ಪ್ರವೇಶಾತಿಯನ್ನು ಸಂಸ್ಥೆಯ ಪ್ರಾಂಶುಪಾಲರ ಹಂತದಲ್ಲಿ ಸೀಟು ಆಯ್ಕೆ ಮಾಡಿಕೊಂಡು ಪ್ರವೇಶ ಪಡೆಯುವ ಸಂದರ್ಭದಲ್ಲಿ ಡಿಪ್ಲೋಮಾ **ಅರ್ಜಿ ನೋಂದಣಿ ಶುಲ್ಕವನ್ನು ಸಾಮಾನ್ಯ ವರ್ಗ/ 2ಎ/ 2ಬಿ/ 3ಎ/ 3ಬಿ ರೂ.100/- & ಪ.ಜಾ/ಪ.ಪಂ/ಪ್ರವರ್ಗ-I ರೂ.50/-** ಅಭ್ಯರ್ಥಿಗಳಿಂದ ನಗದು ರೂಪದಲ್ಲಿ ಪಾವತಿಸಿಕೊಳ್ಳಲು ಉಲ್ಲೇಖ(2)ರ ಪ್ರವೇಶಾಧಿಸೂಚನೆಯಲ್ಲಿ ತಿಳಿಸಲಾಗಿತ್ತು. ಅದರಂತೆ, ಪ್ರವೇಶ ಪಡೆದ ಅಭ್ಯರ್ಥಿಗಳು ಪ್ರವೇಶ ಸಮಯದಲ್ಲಿ ಪಾವತಿಸಿರುವ ಅರ್ಜಿ ನೋಂದಣಿ ಶುಲ್ಕದಿಂದ ಸಂಗ್ರಹವಾಗಿರುವ ಒಟ್ಟು ಹಣವನ್ನು ಸಂಬಂಧಪಟ್ಟ ಪಾಲಿಟೆಕ್ನಿಕ್‌ನ ಪ್ರಾಂಶುಪಾಲರ ಪಿ.ಡಿ. ಖಾತೆಯಿಂದ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಈ ಕೆಳಕಂಡ ಎಸ್.ಬಿ. ಖಾತೆಗೆ NEFT ಮುಖಾಂತರ ಕೂಡಲೇ ಜಮೆ ಮಾಡಲು ಸೂಚಿಸಲಾಗಿದೆ.

| ಬ್ಯಾಂಕ್ | ಖಾತೆಯ ಹೆಸರು | ಖಾತೆ ಸಂ. | ಐ.ಎಫ್.ಎಸ್.ಸಿ ಸಂಖ್ಯೆ |
|---|---|---|---|
| ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮಲ್ಲೇಶ್ವರಂ ಶಾಖೆ, ಬೆಂಗಳೂರು | **DCET-2023 Application Fee Collection Account** | **36843662415** | **SBIN0040017** |

ಸರ್ಕಾರಿ ಹಾಗೂ ಅನುದಾನಿತ ಪಾಲಿಟೆಕ್ನಿಕ್‌ನ ಪ್ರಾಂಶುಪಾಲರು ಮೇಲ್ಕಂಡ ಖಾತೆಗೆ ಜಮೆ ಮಾಡಿದ ಬಗ್ಗೆ ಮಾಹಿತಿಯನ್ನು ಕಾರ್ಯನಿರ್ವಾಹಕ ನಿರ್ದೇಶಕರು, **ಕರ್ನಾಟಕ ಪರೀಕ್ಷಾ ಪ್ರಾಧಿಕಾರ,** ಸಂಪಿಗೆ ರಸ್ತೆ, ಮಲ್ಲೇಶ್ವರಂ 18ನೇ ಕ್ರಾಸ್, ಬೆಂಗಳೂರು – 560 003 ಇವರಿಗೆ ಕಳುಹಿಸಿ **ಅದರ ಪ್ರತಿಯನ್ನು ಆಯುಕ್ತಾಲಯಕ್ಕೆ ಸಲ್ಲಿಸಲು** ತಿಳಿಸಲಾಗಿದೆ. ಸದರಿ ಮಾಹಿತಿಯ ಸಾಫ್ಟ್ ಕಾಪಿಯನ್ನು ಇ-ಮೇಲ್ ವಿಳಾಸ: **keauthority-ka@nic.in** ಹಾಗೂ **dteacm.bengaluru@gmail.com** ಗೆ ಕಳುಹಿಸಲು ಸಹ ಸೂಚಿಸಲಾಗಿದೆ.

ಆಯುಕ್ತರು
**ಕಾಲೇಜು** ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು

ಇವರಿಗೆ,

ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಅನುದಾನಿತ ಪಾಲಿಟೆಕ್ನಿಕ್ ಪ್ರಾಂಶುಪಾಲರುಗಳಿಗೆ – ಮಾಹಿತಿಗಾಗಿ ಹಾಗೂ ಅನುಸರಣೆಗಾಗಿ.

<u>ಪ್ರತಿ ಇವರಿಗೆ ಮಾಹಿತಿಗಾಗಿ:-</u>

1. ಮಾನ್ಯ ಆಯುಕ್ತರವರ ಆಪ್ತಶಾಖೆಗೆ.
2. ಮಾನ್ಯ ನಿರ್ದೇಶಕರವರ ಆಪ್ತಶಾಖೆಗೆ.
3. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಸಂಪಿಗೆ ರಸ್ತೆ, ಮಲ್ಲೇಶ್ವರಂ 18ನೇ ಕ್ರಾಸ್, ಬೆಂಗಳೂರು – 560 003.
4. ಕಾರ್ಯದರ್ಶಿಗಳು, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು.
5. ಆಡಳಿತಾಧಿಕಾರಿಗಳು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
6. ಇ-ಗವರ್ನೆನ್ಸ್ ವಿಭಾಗಕ್ಕೆ - ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸುವುದು.
7. ಡಿವಿಪಿ(2) ವಿಭಾಗಕ್ಕೆ.
8. ನಗದು ವಿಭಾಗಕ್ಕೆ.
9. ಕಛೇರಿ ಪ್ರತಿ.

[redacted]